ಕರ್ನಾಟಕ ಸರ್ಕಾರ

(ಕೃಷಿ ಇಲಾಖೆ)

ಸಂ.ಉಕೃನಿ(ರ&ಸಾ)/ಸಾಗೋವಿ/ಪರವಾನಗಿ/2021-22

ಕೃಷಿ ಆಯುಕ್ತಾಲಯ
ಶೇಷಾದ್ರಿ ರಸ್ತೆ, ಬೆಂಗಳೂರು-01
ದಿನಾಂಕ:15.09.2021

ವಿಷಯ:- ರಾಜ್ಯ ಮಟ್ಟದ ಸಗಟು ಗೊಬ್ಬರ ಮಾರಾಟ ಪರವಾನಗಿ ನೀಡುವ ಕುರಿತು.

ಉಲ್ಲೇಖ: 1. ಇಲಾಖೆ ಕಛೇರಿ ಆದೇಶ ಸಂ.ಸಾಗೋವಿ/ಪರವಾನಗಿ/2020-21 ದಿನಾಂಕ:21.09.2020.
2. ಕರ್ನಾಟಕ ರಾಜ್ಯ ಸರ್ಕಾರದ ಅಧಿಸೂಚನೆ-III ಸಂ.AGRI-ACT/195/2020 ದಿನಾಂಕ:04.09.2021.
3. ಕರ್ನಾಟಕ ರಾಜ್ಯ ಸರ್ಕಾರದ ಅಧಿಸೂಚನೆ-V ಸಂ. AGRI-ACT/195/2020 ದಿನಾಂಕ:14.09.2021.

**********

ಪ್ರಸ್ತಾವನೆ:

ರಾಜ್ಯ ಮಟ್ಟದ ಸಗಟು ಗೊಬ್ಬರ ಮಾರಾಟ ಪರವಾನಗಿಯನ್ನು ರಾಜ್ಯಮಟ್ಟದ/ಹೊರ ರಾಜ್ಯದ ವಿವಿಧ ರಸಗೊಬ್ಬರ/ ಗೊಬ್ಬರಗಳ ಉತ್ಪಾದಕರು, ಆಮದುದಾರರು, ದಾಸ್ತಾನು ನಿರ್ವಹಣೆ ಸಂಸ್ಥೆಗಳಿಗೆ, ಸೀಮಿತಗೊಳಿಸಿ ಉಲ್ಲೇಖಿತ-1ರನ್ವಯ ಆದೇಶಿಸಲಾಗಿರುತ್ತದೆ. ರಸಗೊಬ್ಬರ ನಿಯಂತ್ರಣ ಆದೇಶ, 1985ರಡಿ, ಕರ್ನಾಟಕ ರಾಜ್ಯ ಸರ್ಕಾರದ ಅಧಿಸೂಚನೆ-III ಸಂ.AGRI-ACT/195/2020 ದಿನಾಂಕ:04.09.2021 ರಲ್ಲಿ ರಾಜ್ಯ ಮಟ್ಟದ ಸಗಟು ಗೊಬ್ಬರ ಮಾರಾಟ ಪರವಾನಗಿಯನ್ನು ರಸಗೊಬ್ಬರ ಉತ್ಪಾದಕರು, ಆಮದುದಾರರು, ದಾಸ್ತಾನು ನಿರ್ವಹಣೆ ಸಂಸ್ಥೆಗಳ ಜೊತೆಗೆ ರಾಜ್ಯದ ಗೊಬ್ಬರ ಮಾರುಕಟ್ಟೆದಾರರು ಮಾರಾಟ ಅನುಮತಿಯನ್ನು ವಿಸ್ತರಿಸಲಾಗಿರುತ್ತದೆ.

ಅದರಂತೆ ರಾಜ್ಯ ಮಟ್ಟದ ಸಗಟು ಗೊಬ್ಬರ ಮಾರಾಟ ಪರವಾನಗಿಯನ್ನು ರಾಜ್ಯದ /ಹೊರ ರಾಜ್ಯದ ವಿವಿಧ ರಸಗೊಬ್ಬರ/ ಗೊಬ್ಬರಗಳ ಉತ್ಪಾದಕರು, ಆಮದುದಾರರು, ದಾಸ್ತಾನು ನಿರ್ವಹಣೆ ಸಂಸ್ಥೆಗಳು, ರಾಜ್ಯದ ಗೊಬ್ಬರ ಮಾರುಕಟ್ಟೆದಾರರು ಉತ್ಪಾದಕರೊಂದಿಗೆ ಒಡಂಬಡಿಕೆ ಮಾಡಿಕೊಂಡು, ಷರತ್ತುಗಳಿಗೆ ಒಳಪಟ್ಟು, ಕರ್ನಾಟಕ ರಾಜ್ಯ ಸರ್ಕಾರದ ಅಧಿಸೂಚನೆ-V ಸಂ. AGRI-ACT/195/2020 ದಿನಾಂಕ:14.09.2021ರನ್ವಯ ಪರಿಷ್ಕರಿಸಿದ ಪರವಾನಗಿ ಶುಲ್ಕವನ್ನು ಪಡೆದು ರಾಜ್ಯ ಮಟ್ಟದ ಸಗಟು ಗೊಬ್ಬರ ಮಾರಾಟ ಪರವಾನಗಿಯನ್ನು ನೀಡಲು ಈ ಕೆಳಕಂಡಂತೆ ಆದೇಶಿಸಿದೆ.

## ಆದೇಶ

ರಾಜ್ಯ ಮಟ್ಟದ ಸಗಟು ಗೊಬ್ಬರ ಮಾರಾಟ ಪರವಾನಗಿ ನೀಡುವ ಕುರಿತು ನೀಡಲಾದ ಆದೇಶ ಸಂ: ಸಾಗೋವಿ/ ಪರವಾನಗಿ/ 2020-21 ದಿನಾಂಕ:21.09.2020 ರನ್ವಯ ನೀಡಲಾದ ಆದೇಶವನ್ನು ರದ್ದುಗೊಳಿಸಿದೆ. ರಸಗೊಬ್ಬರ ನಿಯಂತ್ರಣ ಆದೇಶ, 1985ರಡಿ ಹೊರಡಿಸಲಾದ ಕರ್ನಾಟಕ ರಾಜ್ಯ ಸರ್ಕಾರದ ಅಧಿಸೂಚನೆ-III ಸಂ.AGRI-ACT/195/2020 ದಿನಾಂಕ:04.09.2021ರಂತೆ, ರಾಜ್ಯ ಮಟ್ಟದ ಸಗಟು ಗೊಬ್ಬರ ಮಾರಾಟ ಪರವಾನಗಿಯನ್ನು ರಾಜ್ಯ ಮತ್ತು ಹೊರ ರಾಜ್ಯದ ಗೊಬ್ಬರಗಳ ಉತ್ಪಾದಕರು, ಆಮದುದಾರರು, ದಾಸ್ತಾನು ನಿರ್ವಹಣೆ ಸಂಸ್ಥೆಗಳ ಜೊತೆಗೆ ರಾಜ್ಯದ ಗೊಬ್ಬರ ಮಾರುಕಟ್ಟೆದಾರರಿಗೆ ವಿವಿಧ ಗೊಬ್ಬರಗಳನ್ನು ಮಾರಾಟ ಮಾಡಲು ಅನುಮತಿಯನ್ನು ವಿಸ್ತರಿಸಲಾಗಿದೆ. ರಾಜ್ಯ ಮಟ್ಟದ ಸಗಟು ಗೊಬ್ಬರ ಮಾರಾಟ ಪರವಾನಗಿಯನ್ನು ಪಡೆಯಲು ಉತ್ಪಾದಕರೊಂದಿಗೆ ಒಡಂಬಡಿಕೆ ಮಾಡಿಕೊಂಡು, ಪರವಾನಗಿ ಷರತ್ತುಗಳಿಗೆ ಒಳಪಟ್ಟು,

ಕರ್ನಾಟಕ ರಾಜ್ಯ ಸರ್ಕಾರದ ಅಧಿಸೂಚನೆ-V ಸಂ. AGRI-ACT/195/2020 ದಿನಾಂಕ:14/09.2021ರಂತೆ ಪರಿಷ್ಕರಿಸಿದ ಪರವಾನಗಿ ಶುಲ್ಕವನ್ನು ಭರಿಸಿ ಇಲಾಖೆಯ ಕೆ-ಕಿಸಾನ್ ತಂತ್ರಾಂಶದಲ್ಲಿ ಅರ್ಜಿ ಸಲ್ಲಿಸಿ ಪಡೆಯಲು ಈ ಮೂಲಕ ಆದೇಶಿಸಿದೆ.

ಅಡಕ: ಉಲ್ಲೇಖಿತ ಸರ್ಕಾರಿ ಅಧಿಸೂಚನೆಗಳು

15/09/21

ನಿಯಂತ್ರಕ ಅಧಿಕಾರಿಗಳು
ಹಾಗು ಕೃಷಿ ಆಯುಕ್ತರು,
ಕೃಷಿ ಇಲಾಖೆ, ಬೆಂಗಳೂರು

ಪ್ರತಿಯನ್ನು ಮಾಹಿತಿಗಾಗಿ ಮತ್ತು ಮುಂದಿನ ಕ್ರಮಕ್ಕಾಗಿ

1. ಅಪರ ಕೃಷಿ ನಿರ್ದೇಶಕರು, (ಸಾವಯವ ಕೃಷಿ), ಕೃಷಿ ಆಯುಕ್ತಾಲಯ, ಬೆಂಗಳೂರು.
2. ಜಂಟಿ ಕೃಷಿ ನಿರ್ದೇಶಕರು, (ರಸಗೊಬ್ಬರ & ಸಸ್ಯ ಸಂರಕ್ಷಣೆ), ರಾಜ್ಯ ಮಟ್ಟದ ಸಗಟು ಗೊಬ್ಬರ ಮಾರಾಟ ಪರವಾನಗಿ ಅಧಿಕಾರಿಗಳು, ಬೆಂಗಳೂರು.
3. ಎಲ್ಲಾ ಜಿಲ್ಲಾ ಜಂಟಿ ಕೃಷಿ ನಿರ್ದೇಶಕರು. ಜಿಲ್ಲಾ ಮಟ್ಟದ ಸಗಟು ಗೊಬ್ಬರ ಮಾರಾಟ ಪರವಾನಗಿ ಅಧಿಕಾರಿಗಳು.
4. ರಾಜ್ಯ ಮಟ್ಟದ ಎಲ್ಲಾ ಸಗಟು ಗೊಬ್ಬರ ಮಾರಾಟ ಪರವಾನಗಿ ಪಡೆದ ಸಂಸ್ಥೆಗಳು.
5. ಕೃಷಿ ನಿರ್ದೇಶಕರು/ಕೃಷಿ ಆಯುಕ್ತರ ಆಪ್ತ ವಿಭಾಗ, ಕೃಷಿ ಆಯುಕ್ತಾಲಯ, ಬೆಂಗಳೂರು

********